

ರಾಜ್ಯದಲ್ಲಿ 2022ರಲ್ಲಿ ನಡೆದ ಸೈಬರ್ ವಂಚನೆಯ ಪ್ರಕರಣಗಳಲ್ಲಿ ₹363 ಕೋಟಿಯಷ್ಟು ಖದೀಮರ ಪಾಲಾಗಿದೆ ಎಂದು ಗೃಹ ಸಚಿವರು ವಿಧಾನಪರಿಷತ್ತಿನ ಪ್ರಶ್ನೋತ್ತರ ಕಲಾಪದಲ್ಲಿ ಮಾಹಿತಿ ನೀಡಿದ್ದಾರೆ. 20 ವರ್ಷಗಳ ಹಿಂದೆ ಸೈಬರ್ ಅಪರಾಧಗಳು ದಿನಕ್ಕೆ 20ರಿಂದ 25 ವರದಿಯಾಗುತ್ತಿದ್ದವು. ಆದರೆ ಈಗ ವರ್ಷಕ್ಕೆ ದಾಖಲಾಗುವ ಪ್ರಕರಣಗಳ ಸಂಖ್ಯೆ ಹತ್ತು ಲಕ್ಷಕ್ಕೂ ಅಧಿಕ.

## ಜಾರ್ಖಂಡ್‌ನ ಜಾಮ್‌ತಾರಾದ ಕುಖ್ಯಾತಿ

ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಗಡಿಗಳಿಗೆ ಹೊಂದಿಕೊಂಡಿರುವ ಪ್ರದೇಶದಲ್ಲಿ ದೇಶದ ಅತಿ ದೊಡ್ಡ ವಂಚನೆಯ ಕೇಂದ್ರವೇ ಹುಟ್ಟಿಕೊಂಡಿದೆ. ಈ ಮೊದಲು ಜಾರ್ಖಂಡ್‌ನ ಜಾಮ್‌ತಾರಾ, ದೇಶದಲ್ಲಿನ ಸೈಬರ್ ವಂಚನೆಯ ಕೇಂದ್ರ ಎನ್ನುವ ಕುಖ್ಯಾತಿಗೆ ಪಾತ್ರವಾಗಿತ್ತು. ಈಗ ಹರಿಯಾಣದ **mEvAtff** ಗ್ಯಾಂಗ್ ಸಾಮಾಜಿಕ ಜಾಲತಾಣ ವಂಚಕರ ಪಟ್ಟಿಯಲ್ಲಿ ಮುಂಚೂಣಿಗೆ ಬಂದಿದೆ. ವ್ಯಕ್ತಿಯನ್ನು ಲೈಂಗಿಕಾಸಕ್ತಿಗೆ ಪ್ರಚೋದಿಸಿ, ಆನ್‌ಲೈನ್ ಮೂಲಕ ಲೈಂಗಿಕ ಚಟುವಟಿಕೆಗಳ ಚಿತ್ರೀಕರಣ ಮಾಡಿ ಬೆದರಿಕೆಯೊಡ್ಡುವ, ಉತ್ಪನ್ನಗಳ ರೀಸೆಲ್ ಹೆಸರಿನಲ್ಲಿ ವಂಚಿಸುವ ಗ್ಯಾಂಗ್‌ಗಳು ಇಲ್ಲಿ ಕೆಲಸ ಮಾಡುತ್ತವೆ.

ದೇಶದಲ್ಲಿ ಈಗ ಇಂಥ ಗ್ಯಾಂಗ್‌ಗಳು ಇತರ ರಾಜ್ಯಗಳಿಗೂ ವ್ಯಾಪಿಸಿವೆ. ಒಡಿಶಾ, ಪಶ್ಚಿಮ ಬಂಗಾಳ, ಬಿಹಾರ, ಕರ್ನಾಟಕ, ಅಸ್ಸಾಂ, ಗುಜರಾತ್, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲೂ ಬೀಡುಬಿಟ್ಟಿರುವ ಇಂಥ ಗ್ಯಾಂಗ್‌ಗಳು, ಸೈಬರ್ ವಂಚನೆಗೆ ಮಿಕಗಳನ್ನು ಹುಡುಕುತ್ತಲೇ ಇರುತ್ತವೆ.

ಸೈಬರ್ ವಂಚಕರ ದಾಳಿಗೆ ಪ್ರತಿರೋಧ ಶಕ್ತಿ ಹೊಂದಿರುವ ವ್ಯಕ್ತಿಗಳೇ ಇಲ್ಲ ಎನ್ನುವ ಸ್ಥಿತಿ ಇಂದಿನದು. ಕಳೆದ ಅಕ್ಟೋಬರ್‌ನಲ್ಲಿ ಡಿಎಂಕೆ ಸಂಸದ ದಯಾನಿಧಿ ಮಾರನ್ ಅವರ ಬ್ಯಾಂಕ್ ಖಾತೆಯಲ್ಲಿದ್ದ ₹99,999, ಅವರ ಗಮನಕ್ಕೇ ಬಾರದೆ, ಎಲ್ಲಾ ರೀತಿಯ ಭದ್ರತಾ ಬೇಲಿಗಳನ್ನು ದಾಟಿ ನೆಟ್ ಬ್ಯಾಂಕಿಂಗ್ ಮೂಲಕ ವರ್ಗಾವಣೆಗೊಂಡಿದೆ. ಇದನ್ನು ಅವರು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದರು. ಬಾಲಿವುಡ್ ನಟ ಅಫ್ತಾಬ್ ಶಿವದಾಸಾನಿ ತಮ್ಮ ಮೊಬೈಲ್‌ಗೆ ಬಂದ ಕೆವೈಸಿ ದಾಖಲಾತಿ ಅಪ್‌ಡೇಟ್ ಮಾಡುವಂತೆ, ಮಾಡದಿದ್ದರೆ ಖಾತೆ ಸ್ಥಗಿತಗೊಳ್ಳುತ್ತದೆ ಎಂಬ ಸಂದೇಶದೊಂದಿಗೆ ಬಂದ ಕೊಂಡಿಯನ್ನು ಕ್ಲಿಕ್ ಮಾಡಿದ್ದರಿಂದ ₹1.5 ಲಕ್ಷ ಕಳೆದುಕೊಂಡಿದ್ದಾರೆ. 2021ರಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಪುತ್ರ ಹರ್ಷಿತಾ ಅವರು ಸೋಫಾ ಖರೀದಿ ಸಂದರ್ಭದಲ್ಲಿ ₹34 ಸಾವಿರ ಕಳೆದುಕೊಂಡಿದ್ದರು. ಇವರಷ್ಟೇ ಅಲ್ಲ, ನಟಿ ಶಬಾನಾ ಆಜ್ಮಿ, ಹಾಸ್ಯ ನಟ ಜಾನಿ ಲಿವರ್ ಸೇರಿದಂತೆ ಅನೇಕ ಪ್ರಸಿದ್ಧರು ವಂಚಕರು ಬೀಸಿದ ಬಲೆಗೆ ಸಿಲುಕಿ ಹಣ ಕಳೆದುಕೊಂಡಿದ್ದಾರೆ.

## ಸೈಬರ್ ಅಪರಾಧ: ಹೆಚ್ಚಳ ಏಕೆ?

ಸೈಬರ್ ಅಪರಾಧಿಗಳು ಯಾವುದೋ ಒಂದು ಕಚೇರಿಯಲ್ಲಿಯೋ ಅಥವಾ ಅಡಗುತಾಣದಲ್ಲಿಯೋ ಕುಳಿತಿರುವುದಿಲ್ಲ. ಒಂದು ಉತ್ತಮ ಸ್ಮಾರ್ಟ್‌ಫೋನ್, ಈ ಹಿಂದೆಯೇ ಸಕ್ರಿಯಗೊಂಡಿರುವ ಸಿಮ್‌ಗಳು ಮತ್ತು ವೇಗದ ಇಂಟರ್‌ನೆಟ್ ಅವರ ಕಾರ್ಯಾಚರಣೆಗೆ ಸಾಕು. ಇವರ ದುಷ್ಕೃತ್ಯಗಳಿಗೆ ಪೂರಕವಾಗಿ ಭಾರತದಲ್ಲಿ ದಿನದಿಂದ ದಿನಕ್ಕೆ ಅಂತರ್ಜಾಲ ಸೌಕರ್ಯದ ಬೆಲೆ ಇಳಿಯುತ್ತಲೇ ಇದೆ. ಕಳೆದ 9 ವರ್ಷಗಳ ಹಿಂದಿನ ದರಕ್ಕೆ ಹೋಲಿಸಿದಲ್ಲಿ ಈಗ ಇದರ ಬೆಲೆ ಶೇ. 96ರಷ್ಟು ಕುಸಿದಿದೆ. ಇದರಿಂದಾಗಿ ಸ್ಮಾರ್ಟ್ ಫೋನ್ ಮತ್ತು ಇಂಟರ್‌ನೆಟ್‌ಗಳು ವ್ಯಾಪಕವಾಗಿ ಬಳಕೆಯಾಗುತ್ತಿದೆ. ಭಾರತದಲ್ಲಿ ಸದ್ಯ ಡಿಜಿಟಲ್ ಕ್ಷೇತ್ರಕ್ಕೆ ಪ್ರವೇಶಿಸಿರುವವರ ಸಂಖ್ಯೆ 84 ಕೋಟಿ. ಜನಧನ ಯೋಜನೆ ಮೂಲಕ 50 ಕೋಟಿ ಹೊಸ ಬ್ಯಾಂಕ್ ಖಾತೆಗಳು ಆರಂಭವಾಗಿವೆ. 2023ರ ಆಗಸ್ಟ್‌ನಲ್ಲಿ ನಡೆದ ಆನ್‌ಲೈನ್ ಪಾವತಿಗಳ ಒಟ್ಟು ಸಂಖ್ಯೆ 10 ಶತಕೋಟಿ.

ತಂತ್ರಜ್ಞಾನವನ್ನು ಅತಿಯಾಗಿ ಅವಲಂಬಿಸಿರುವ ಕಾರಣದಿಂದಾಗಿ, ಶಿಕ್ಷಣ, ಮನರಂಜನೆ, ಪ್ರವಾಸ, ಆಸ್ಪತ್ರೆ, ವಿಮೆ, ಬ್ಯಾಂಕ್, ಶಾಪಿಂಗ್ ಸೇರಿದಂತೆ ನಮ್ಮ ಬದುಕಿನ ಬಹುತೇಕ ಕ್ಷೇತ್ರಗಳಲ್ಲಿ ಆನ್‌ಲೈನ್ ವಹಿವಾಟು ಸ್ಥಾನ ಪಡೆದಿದೆ. ಕೋವಿಡ್–19ರ ನಂತರ ಆನ್‌ಲೈನ್ ಬಳಕೆದಾರರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ.

### ಆಧಾರ್ ಲಾಕ್ ಮಾಡುವುದು ಹೇಗೆ?

ಆ್ಯಂಡ್ರಾಯ್ಡ್ ಅಥವಾ ಐಫೋನ್‌ನಂತಹ ಸ್ಮಾರ್ಟ್‌ಫೋನ್ ಬಳಸುವವರು ತಮ್ಮ ಮೊಬೈಲ್‌ನಲ್ಲಿ ಆಧಾರ್ ಎಂಆಧಾರ್ (mAadhar) ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಿ. ಆಧಾರ್ ಅನ್ನು ಬೇರೆಯವರು ದುರುಪಯೋಗಪಡಿಸಿಕೊಳ್ಳದಂತೆ ಅದನ್ನು ಲಾಕ್ ಮಾಡಿ. ಆಗ 16 ಸಂಖ್ಯೆಯ ವರ್ಚುವಲ್ ಐಡಿ ಜೊತೆಗೆ ಆಧಾರ್ ಲಾಕ್ ಆಗಲಿದೆ. ಈ 16 ಸಂಖ್ಯೆ ನಿಮ್ಮ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ರೂಪದಲ್ಲಿ ಬಂದರೂ, ಅದನ್ನು ಒಂದು ಕಡೆ ಸುರಕ್ಷಿತವಾಗಿ ಬರೆದಿಟ್ಟುಕೊಳ್ಳಿ.

ಪಡಿತರ ಪಡೆಯುವಾಗ, ಆಸ್ತಿ ನೋಂದಣಿ, ಆಧಾರ್ ಮಾಹಿತಿ ಬದಲು ಇತ್ಯಾದಿ ಸಂದರ್ಭದಲ್ಲಿ ಬೆರಳಚ್ಚು ತೆರೆಯಲು ಕೋರಿಕೆ ಸಲ್ಲಿಸಿ. ಬರುವ ಒಟಿಪಿ ಸಂಖ್ಯೆಯನ್ನು ನಮೂದಿಸಿದರೆ ಬಯೊಮೆಟ್ರಿಕ್ ಬಳಕೆಗೆ ಹೇರಿರುವ ನಿರ್ಬಂಧ ತೆರವುಗೊಳ್ಳಲಿದೆ. ಇದು 10 ನಿಮಿಷಗಳಿಗೆ ಮಾತ್ರ ತೆರೆದಿರುತ್ತದೆ. ನಂತರ ಸಹಜವಾಗಿ ಅದು ಲಾಕ್ ಆಗಲಿದೆ.